11) ಪರಸ್ಪರ ಅಭಿನಂದನೆ:

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸದನದ ಈ ಅಧಿವೇಶನದ ಕೊನೆಯ ದಿವಸ ಇವತ್ತು ಅತ್ಯಂತ ಸಮಸ್ಯಾತ್ಮಕವಾದ ಬರ ಮತ್ತು ಅದರ ಪರಿಹಾರ ಕಾಮಗಾರಿಗಳ ವಿಚಾರದಲ್ಲಿ ಮತ್ತು ಇನ್ನೂ ಹಲವಾರು 13 ಮಸೂದೆಗಳನ್ನು ಈ ಸದನ ಚರ್ಚೆ ಮಾಡಿ, ಅವುಗಳಿಗೆ ಸಭೆ ಅನುಮತಿ ದೊರಕಿದೆ. ಮತ್ತು ಇನ್ನೂ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ, ಆಗಿಂದಾಗ್ಗೆ, ಆ ಸಮಸ್ಯೆಗಳ ಗಾತ್ರ ಮತ್ತು ವೈಪರೀತ್ಯಗಳನ್ನು ಕುರಿತು ಈ ಸದನ ಸರ್ಕಾರದ ಜೊತೆಯಲ್ಲಿ ಸಹಕರಿಸಿ ಕಳೆದ ಹತ್ತಾರು ದಿವಸಗಳಲ್ಲಿ ತಾವು ಕೊಟ್ಟರತಕ್ಕಂತಹ ಸಹಕಾರಕ್ಕೆ ಸರ್ಕಾರದ ಪರವಾಗಿ ನಾನು ಅನಂತವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ವಿವಿಧ ರಾಜಕೀಯ ಪಕ್ಷಗಳ ಮುಖಂಡರಿಗೆ ಮತ್ತು ಸದನದ ಎಲ್ಲಾ ಸದಸ್ಯರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ದಿನಗಳಲ್ಲಿ ಒಳ್ಳೆಯ ಮಳೆಯಾಗಿ, ಅಲ್ಪಸ್ವಲ್ಪ ಹಿಂಗಾರು ಬೆಳೆಯಾದರೂ ನಮ್ಮ ರೈತಾಪಿ ಜನಗಳಿಗೆ ಕೈ ಸೇರತಕ್ಕಂತಹ ಅವಕಾಶ ಲಭ್ಯವಾಗಲಿ ಎಂದು ಹಾರೈಸಿ, ಮತ್ತೊಮ್ಮೆ ಎಲ್ಲಾ ಸದಸ್ಯರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ವ್ಯಕ್ತಪಡಿಸಿದ ರೀತಿಯಲ್ಲಿ ಸದನ ಈ ಬಾರಿ ಅತ್ಯಂತ ಹಲವಾರು ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿದೆ, ವಿರೋಧ ಪಕ್ಷಗಳು ಪ್ರಸ್ತಾಪ ಮಾಡಿದ ಹೆಚ್ಚಿನ ವಿಚಾರಗಳಿಗೆ ಸರ್ಕಾರ ಹೃದಯಸ್ಪರ್ಶಿಯಾಗಿ ಸ್ಪಂದಿಸಿರುವುದನ್ನು ನಾವು ನೋಡಿದ್ದೇವೆ. ಹಲವಾರು ಸಂದರ್ಭಗಳಲ್ಲಿ ವಿರಿದ ಧಾಟಿಗಳಿರಬಹುದು, ಮಾತಿನ ಸಂದರ್ಭಗಳಿರಬಹುದು, ಹಲವಾರು ವ್ಯತ್ಯಾಸಗಳು ನಡೆದಿವೆ. ಆದರೂ ಕೂಡ ಈ ಅಧಿವೇಶನ ಸಾಧಾರಣವಾದ ಅಧಿವೇಶನವಾಗದೆ, ಒಂದು ಉತ್ತಮ ರೀತಿಯ ಅಧಿವೇಶನವಾಗಿದೆ. ಈ ಸಂದರ್ಭದಲ್ಲಿ ಈ ಸದನದಲ್ಲಿ ವಿವಿಧ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟ ತಮಗೆ ಹಾಗೂ ನಮ್ಮ ವಿಚಾರಗಳಿಗೆ ಸ್ಪಂದಿಸಿದ ಮಾನ್ಯ ಮುಖ್ಯ ಮಂತ್ರಿಗಳಿಗೂ ಹಾಗೂ ಅವರ ಸಚಿವ ಸಂಪುಟದ ಸದಸ್ಯರಿಗೆ ನಮ್ಮ ಜೊತೆ ಸಹಕರಿಸಿದ ನಮ್ಮ ಪಕ್ಷದ ಸದಸ್ಯರಿಗೆ ಹಾಗೂ ವಿರೋಧ ಪಕ್ಷದಲ್ಲಿರುವಂತಹ ಸದಸ್ಯರಿಗೆ ಹಾಗೂ ಎಲ್ಲಾ ನಮ್ಮ ಪಕ್ಷದ ಸದಸ್ಯರಿಗೆ ಹಾಗೂ ನಮ್ಮ ಎಲ್ಲಾ ಶಾಸಕ ಮಿತ್ರರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಈ ಅಧಿವೇಶನ ನಮ್ಮ ಅಭಿಪ್ರಾಯದಲ್ಲಿ ಇನ್ನೂ ಸ್ವಲ್ಪ ದಿವಸ ನಡೆಯಬೇಕಾಗಿತ್ತು. ಏಕೆಂದರೆ, ಡಾ: ಜಿ.ಪರಮೇಶ್ವರ್‌ರವರು ನಿನ್ನೆ ಮಾಡಿದಂಥ ಭಾಷಣ, ಶ್ರೀಮತಿ ಮೋಟಮ್ಮನವರು ಸಮಾಜ ಕಲ್ಯಾಣ ಇಲಾಖೆಯ ಅಂಗನವಾಡಿ ವಿಷಯದಲ್ಲಿರತಕ್ಕಂಥ ಅನೇಕ ಸಮಸ್ಯೆಗಳು ಹಾಗೂ ಮಂತ್ರಿಗಳಿಗೂ ಕೂಡ ಅನೇಕ ಸಮಸ್ಯೆಗಳಿರುತ್ತವೆ. ಅವರಿಗೆ ಹಣಕಾಸು ಬಿಡುಗಡೆ

ಮಾಡುವುದು, ಅವರ ಇಲಾಖೆಯಲ್ಲಿ ಶಾಸಕರ ಸಹಕಾರ ಇಂತಹ ವಿಚಾರದಲ್ಲಿ ಬಹಳಷ್ಟು ಹೇಳತಕ್ಕಂಥದ್ದು ಇದೆ ಎಂದು ಅವರ ಭಾಷಣದಿಂದ ಗೊತ್ತಾಗಿದೆ. ವಿಷಯ ಸಮಿತಿಗಳ ಬಗ್ಗೆ ನಾವು ಸೀಮಿತವಾಗಿರುವುದರಿಂದ ವ್ಯಾಪಕವಾಗಿ ಚರ್ಚೆ ನಡೆದಿಲ್ಲ. ಆದರೆ ಅದರ ಒಂದು ಪ್ರಯೋಗ ನಡೆದಿದೆ ನಡೆಯಲಿ. ತಾವು ಈ ಅಧಿವೇಶನದ ಸಮಯದಲ್ಲಿ ಎಂತಹ ಶಿಸ್ತಿನ ಸಂದರ್ಭ ಬಂದರೂ ಸಹ ಬಹಳ ತಾಳ್ಮೆಯಿಂದ, ನಾವು ಕೆಲವು ಸಂದರ್ಭಗಳಲ್ಲಿ ಕೋಪ ಆವೇಶಕ್ಕೆ ಒಳಗಾದರೂ ಸಹ ತಾವು ತಮ್ಮ ತಾಳ್ಮೆಯನ್ನು ಕಳೆದುಕೊಳ್ಳದೆ ನಮ್ಮನ್ನು ಒಂದೇ ದೃಷ್ಟಿಯಿಂದ ನೋಡಿದ್ದೀರಿ. ನಾನು ಮೊಟ್ಟ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎರಡನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಿಂದ ರೈತರು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದರು. ನಾವು ಹಲವಾರು ವಿಚಾರಗಳನ್ನು ಇಲ್ಲಿ ಹೇಳುತ್ತೇವೆ. ಸರ್ಕಾರ ಆಡಳಿತ ನಡೆಸತಕ್ಕಂತಹವರು, ನಾವು ಮಾತನಾಡತಕ್ಕಂತಹ ಸನ್ನಿವೇಶದಲ್ಲಿ ಸರ್ಕಾರದ ಇತಿಮಿತಿಯನ್ನು, ಹಣಕಾಸಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮಾಡಿದ್ದೇವೆ. ಇಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಬರಗಾಲದ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಕೆಪಿಟಿಸಿಎಲ್‌ನಲ್ಲಿ ಕೆಲವು ಕನ್‌ಸೆಷನ್‌ಗಳನ್ನು ಅನೌನ್ಸ್ ಮಾಡಿದರು. ಇದು ರೈತರಿಗೆ ಸ್ವಲ್ಪ ಮಟ್ಟಿನ ಅನುಕೂಲವಾಗುವುದರಲ್ಲಿ ಯಾವುದೇ ಸಂಶಯ ಇಲ್ಲ. ಅದಾದ ನಂತರ ಬೆಂಗಳೂರಿನಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ನಾವೆಲ್ಲಾ ಬಹಳ ಪ್ರಸ್ತಾಪ ಮಾಡಿದ್ದೆವು. ಒಂದು ಎಚ್ಚರಿಕೆಯ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನೀರಾ ವಿಚಾರದಲ್ಲಿ ಸಹ ಇವತ್ತು ಬೆಳುವಲಿ ಏನು ನಡೆಯುತ್ತಿದೆ, ಅದರ ಬಗ್ಗೆ ಒಂದು ತಜ್ಞರ ಸಮಿತಿ ನೇಮಕ ಮಾಡಿ ಅದರ ವರದಿಯನ್ನು ಪಡೆದು ಓಪನ್ ಮೈಂಡ್ ನಾನು ಇಟ್ಟುಕೊಂಡಿದ್ದೇನೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ರೈತರ ಆತ್ಮಹತ್ಯೆ ಬಗ್ಗೆ ಕೂಡ ಒಂದು ಸಮಿತಿ ಮಾಡುತ್ತೇವೆಂದು ಹೇಳಿರತಕ್ಕಂಥದ್ದು ಅತ್ಯಂತ ಸಂತೋಷದ ವಿಷಯ. ರೈತರ ಆತ್ಮಹತ್ಯೆ ವಿಚಾರದಲ್ಲಿ ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಸದಸ್ಯರುಗಳ ಸಮಸ್ಯೆಗಳು ಬೇಡಿಕೆಗಳ ಬಗ್ಗೆ ಈ ಅಧಿವೇಶನದಿಂದ ರಚನಾತ್ಮಕವಾಗಿ ನಾವು ನಮ್ಮ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸುವುದರ ದೃಷ್ಟಿಯಿಂದ, ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಎಂದು ನಾವು ಹೇಳಿಕೊಳ್ಳುವುದಕ್ಕಾಗಿ ಸಾಧ್ಯವಾಗುತ್ತದೆ. ನಾಡಿದ್ದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಸಭಾ ಲೋಕಸಭಾ ಸದಸ್ಯರು ಮತ್ತು ಸರ್ವ ಪಕ್ಷಗಳ ನಾಯಕರೂ ಕೂಡ ಪ್ರಧಾನಿಯವರ ಬಳಿ ಹೋಗಿ ಮುಂಗಾರಿನ ಬೆಳೆ ರಾಜ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ, ಕುಡಿಯುವ ನೀರಿಗೆ ಏನು ತೊಂದರೆ ಇದೆ, ಈ ವಿಚಾರದಲ್ಲಿ ನಾವು ಅವರ ನಾಯಕತ್ವದಲ್ಲಿ ಮನವಿಯನ್ನು ಸಲ್ಲಿಸುತ್ತಿದ್ದೇವೆ. ರಾಜ್ಯಾದ್ಯಂತ ಮಳೆ ಬರತಕ್ಕಂತಹ ಚಿಹ್ನೆಗಳು ಕಾಣಬರುತ್ತಿವೆ. ಮಳೆ ಬಂದರೆ ಬಹಳ ಒಳ್ಳೆಯದು. ಇದಕ್ಕಿಂತ ದೊಡ್ಡದು ಇನ್ನೇನೂ ಇಲ್ಲ. ಯಾವ ಸರ್ಕಾರವೇ ಆಗಿರಲಿ ಮಳೆ ಬರತ್ಕಂಥ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸೋಮಶೇಖರ್‌ರವರೂ ಇದರ ಸಲಹೆಯನ್ನು ಕೊಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳೂ ಸದನದ ಹೊರಗಡೆ ಹೇಳಿದ್ದರು. ಸರ್ವ ಪಕ್ಷಗಳ

ನಿಯೋಗ ತೆಗೆದುಕೊಂಡು ಹೋಗುತ್ತೇನೆಂದು ಹೇಳಿರುವುದು ಒಳ್ಳೆಯ ಕೆಲಸವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೆಗಡೆಯವರ ಬಗ್ಗೆ ಸ್ವಲ್ಪ ಸಿಟ್ಟನಿಂದ ಮಾತನಾಡಿದರು ಅದು ಏಕೆಂದು ಗೊತ್ತಾಗಲಿಲ್ಲ. ಕೆಲವು ಸಂದರ್ಭಗಳಲ್ಲಿ ಅದೂ ಕೂಡ ಅವಶ್ಯಕತೆ ಇರುತ್ತದೆ. ಮುಖ್ಯ ಮಂತ್ರಿಗಳು ಬಹಳ ಹಿರಿಯ ಸದಸ್ಯರು. ಮಾನ್ಯ ಎಸ್.ಎಂ.ಕೃಷ್ಣರವರು, ಮಾನ್ಯ ಘೋರ್ಪಡೆಯವರು ಕೆ.ಹೆಚ್.ರಂಗನಾಥ್‌ರವರು, ಖರ್ಗೆಯವರು, ಧರ್ಮಸಿಂಗ್‌ರವರು, ಶ್ರೀಕಂಠಯ್ಯನವರು, ಇವರೆಲ್ಲರೂ ಬಹಳ ಹಿರಿಯರಿದ್ದಾರೆ. ತಾವು ಸಿಂಗಾಪುರವನ್ನು ಮಾಡಬೇಕೆಂಬುದು ನಮ್ಮ ಉದ್ದೇಶ ಅಲ್ಲ ಎಂದು ಏನು ಹೇಳಿದ್ದೀರಿ, ಹಾಗೆಯೇ ನೀವೆಲ್ಲಾ ನಮ್ಮ ದೃಷ್ಟಿಯಿಂದ ಬೆಂಚ್ ಮಾರ್ಕ್‌ಗಳಾಗಿರುತ್ತೀರಿ. ತಾವು ಸ್ಪಂದಿಸತಕ್ಕಂಥದ್ದು, ತಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಇನ್ನು 20 ವರ್ಷಗಳ ನಂತರ ನಾನು ಬೇರೆ ಸ್ಥಾನದಲ್ಲಿ ಕೂತು ಹೇಳತಕ್ಕಂತಹ ಸನ್ನಿವೇಶ ಇರುತ್ತದೆ. ತಾವು ಯಾವ ದೃಷ್ಟಿಯಿಂದ ಬೇಸರ ಮಾಡಿಕೊಂಡಿರಿ ನಮಗೆ ಗೊತ್ತಿಲ್ಲ. ಅದೇನೇ ಆಗಿರಲಿ ಅಂಥ ಪ್ರಸಂಗ ಮತ್ತೆ ಮರುಕಳಿಸುವುದಿಲ್ಲವೆಂದು ನಾನು ಭಾವಿಸಿಕೊಂಡು ಇಲ್ಲಿಯವರೆವಿಗೆ ಸರ್ಕಾರದವರು, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿವಿಧ ಇಲಾಖೆಗಳ ಮಂತ್ರಿಗಳೂ ಕೂಡ ನಮ್ಮ ಸಮಸ್ಯೆಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಸ್ಪಂದಿಸಿದ್ದಾರೆ. ಸಾಕಷ್ಟು ಆಬ್‌ಸೆನ್ಸ್ ಕೂಡ ಇತ್ತು. ಅದನ್ನು ಮುಖ್ಯಮಂತ್ರಿಗಳೂ ಕೂಡ ಗಮನಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಅಧ್ಯಕ್ಷರಾದ ತಮಗೆ ನಾನು ವಿಶೇಷವಾಗಿ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಒಂದು ವಿಷಯದಲ್ಲಿ ನನ್ನ ಕರ್ತವ್ಯ ಲೋಪವಾಗಿದೆ. ನಮ್ಮೆಲ್ಲರ ವೈಪರಿತ್ಯಗಳನ್ನು ತಾವು ಸಹಿಸಿ ಭರಿಸಿ ಈ ಅಧಿವೇಶನದ ಕಾರ್ಯಕ್ರಮಗಳನ್ನು ಬಹಳ ಯಶಸ್ವಿ ಮಾಡಿದ್ದೀರಿ. ಅದಕ್ಕೋಸ್ಕರ ಇಡೀ ಸದನದ ಪರವಾಗಿ ಸಭಾನಾಯಕನಾಗಿ ತಮಗೆ ನಮ್ಮೆಲ್ಲರ ವಂದನೆಗಳನ್ನು ಅತ್ಯಂತ ಗೌರವಯುತವಾಗಿ ಸಮರ್ಪಿಸಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ನನ್ನದೂ ಕೂಡ ಒಂದು ಲೋಪವಾಯಿತು. ನಮ್ಮ ಪತ್ರಿಕಾಮಿತ್ರರೂ ಕೂಡ ರಾತ್ರಿ 9-30 ಗಂಟೆಯವರೆಗೂ ಕುಳಿತುಕೊಂಡು ಸದನದ ಕಾರ್ಯ ಕಲಾಪಗಳನ್ನು ವೀಕ್ಷಿಸಿ ಸಾರ್ವಜನಿಕರಿಗೆ ತಿಳಿಸುವಲ್ಲಿ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ರಾತ್ರಿ 9-30 ತನಕ ಕುಳಿತುಕೊಂಡು ಕೆಲಸ ಮಾಡುವುದು ಅಷ್ಟೇನೂ ಸುಲಭವಾದ ಕೆಲಸವಲ್ಲ. ಅವರಿಗೂ ಕೂಡ ನಾನು ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ಸುಮಾರು ಮೂರು ವಾರಗಳಿಂದ ಎಲ್ಲಾ ಪಕ್ಷದ ಸದಸ್ಯರು ಅಧ್ಯಕ್ಷರೊಡನೆ ಸಹಕರಿಸಿದ್ದೀರಿ. ಇದರ ಜೊತೆಗೆ ಪತ್ರಿಕೆಯವರು ಹಾಗೂ ಟಿ.ವಿ.ಮಾಧ್ಯಮದವರೂ ಕೂಡ

ಸಹಕಾರ ಕೊಟ್ಟಿದ್ದಾರೆ. ಈ ಬಾರಿಯ ಅಧಿವೇಶನದಲ್ಲಿ ವಿಶೇಷವಾಗಿ ರೈತರ ಬಗ್ಗೆಯೇ ನಾವು ಹೆಚ್ಚು ಹೆಚ್ಚಾಗಿ ಚರ್ಚಿಸಿದ್ದೇವೆ. ಎರಡನೆಯದಾಗಿ ವಿಧೇಯಕಗಳ ಮೇಲೆ ಸುಮಾರು ಎಪ್ಪತ್ತು ಸದಸ್ಯರುಗಳು ಚರ್ಚೆಯಲ್ಲಿ ಪಾಲ್ಗೊಂಡು ಸಲಹೆಗಳನ್ನು ಕೊಟ್ಟಿದ್ದಾರೆ. ವಿರೋಧಪಕ್ಷದ ಮತ್ತು ಆಡಳಿತ ಪಕ್ಷದ ಸದಸ್ಯರೆಲ್ಲರೂ ಬಹಳ ಉತ್ತಮವಾದ ಸಲಹೆಗಳನ್ನೇ ಕೊಟ್ಟಿದ್ದಾರೆ. ಬಹುಶಃ ಈ ಎರಡು ವರ್ಷಗಳಲ್ಲಿ ನಡೆದಿರುವಂಥ ಅಧಿವೇಶನಗಳಲ್ಲಿ ಈ ಬಾರಿಯ ಅಧಿವೇಶನದಲ್ಲಿಯೇ ಹೆಚ್ಚು ಒಳ್ಳೆಯ ಸಲಹೆಗಳನ್ನು ಮಾನ್ಯ ಸದಸ್ಯರುಗಳು ಕೊಟ್ಟಿರುವುದರಿಂದ ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಆಕಸ್ಮಾತ್ ನಾನು ಯಾವಾಗಲಾದರೂ ಮಾತಿನ ಭರದಲ್ಲಿ ಗಡುಸಾಗಿ ಮಾತನಾಡಿದ್ದರೂ ಕೂಡ ಅವೆಲ್ಲವನ್ನೂ ಎಲ್ಲರೂ ಮರೆಯೋಣ. ಈಗ ಸದನವನ್ನು ಅನಿರ್ಧಿಷ್ಟ ಕಾಲ ಮುಂದೂಡುತ್ತೇನೆ.

(ಸದನವು ರಾತ್ರಿ 8 ಗಂಟೆ 12 ನಿಮಿಷಕ್ಕೆ ಅನಿರ್ಧಿಷ್ಟ ಕಾಲಕ್ಕೆ ಮುಂದೂಡಲ್ಪಟ್ಟಿತು)